ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.

## ಸಿ.ಸಿ.ನಂ.1656/2023

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಗುರು** | | |
| **ತಂದೆಃಹೆಸರು** | **ಖೀರಪ್ಪ ರಾಥೋಡ್** | **ಪಿಡಬ್ಲ್ಯೂಃ** | **6** |
| **ವಯಸ್ಸು** | **26 ವರ್ಷ** | **ಸಿಡಬ್ಲ್ಯೂಃ** | **6** |
| **ಉದ್ಯೋಗಃ** | **ಕೂಲಿ** | | |
| **ವಾಸ ಸ್ಥಳಃ** | **ಮಾರಲದಿನ್ನಿ ತಾಂಡ. ತಾ. ಮಸ್ಕಿ.** | | |

**ದಿನಾಂಕ 18-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ**

ಈ ದಿನ ನ್ಯಾಯಾಲಯದಲ್ಲಿ ಆರೋಪಿಯು ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಕಲಂ 317 ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿ, ಗುರುತಿಸುವ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದಿದ್ದರಿಂದ, ಈ ಕೆಳಕಂಡಂತೆ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು.

ಮೃತ ಲಕ್ಷ್ಮಣ ನನ್ನ ಅಕ್ಕನ ಗಂಡ. 2 ವರ್ಷಗಳ ಹಿಂದೆ ನಾನು & ಮೃತ ಲಕ್ಷ್ಮಣರವರು ಅವರ ಮಗಳನ್ನು ಶಾಲೆಗೆ ಬಿಟ್ಟು ಬೆ.10 ಗಂಟೆಯ ಸುಮಾರಿಗೆ ಬರುತ್ತಿದ್ದಾಗ, ಸಿಂಧನೂರು-ಮಸ್ಕಿ ರಸ್ತೆಯ ಪೆ.ಬಂಕ್ ಹತ್ತಿರ ನಮ್ಮ ಎದುರುಗಡೆಯಿಂದ ಬಿಳಿ ಬಣ್ಣದ ಕಾರ್ ಅತೀವೇಗವಾಗಿ ಬಂದು, ನಮ್ಮ ಮೋ.ಸೈ. ನ ಎಡಗಡೆಗೆ ಟಕ್ಕರ್ ಕೊಟ್ಟಿದ್ದರಿಂದ, ಮೃತ ಲಕ್ಷ್ಮಣ ರವರು ಕೆಳಗೆ ಬಿದ್ದಿದ್ದರು, ,ಅವರ ತಲೆಗೆ, ಕಾಲಿಗೆ ಪೆಟ್ಟಾಗಿ ಭಾರಿ ರಕ್ತಗಾಯವಾಗಿದ್ದವು. ನಂತರ ಲಕ್ಷ್ಮಣರವರನ್ನು ಅಂಬ್ಯುಲೆನ್ಸ್‌ನಲ್ಲಿ ಸಿಂಧನೂರು ಸರ್ಕಾರಿ ಆಸ್ಪತ್ರೆಗೆ ಬಂದು, ನಂತರ ಬಳ್ಳಾರಿಯ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಲಕ್ಷ್ಮಣ ರವರು ಮೃತಪಟ್ಟಿದ್ದರು. ಸದರಿ ಘಟನೆಯಲ್ಲಿ ನನಗೆ ಯಾವುದೇ ಗಾಯಗಳಾಗಿರಲಿಲ್ಲ.

ಸಾಕ್ಷಿಯು ನಿಪಿ-3 ರಿಂದ 5 ರಲ್ಲಿರುವ ಫೋಟೋವನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಅಪಘಾತ ಕಾರಿನ ಚಾಲಕನ ತಪ್ಪಿನಿಂದ ಆಗಿತ್ತು.

**<u>ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ</u>**

1. ನಿಮಗೆ ಈ ಪ್ರಕರಣದ ಬಗ್ಗೆ ಏನೂ ಗೊತ್ತಿಲ್ಲ ಎಂದರೆ ಸಾಕ್ಷಿಯು ನಾನು ಆಗಿರುವುದನ್ನು ಹೇಳುತ್ತಿದ್ದೇನೆ ಎನ್ನುತ್ತಾರೆ.

2. ಘಟನೆ ನಡೆದ ದಿನಾಂಕ ನನಗೆ ನೆನಪಿಲ್ಲ, ಆದರೆ 2 ವರ್ಷಗಳ ಹಿಂದೆ ಘಟನೆ ನಡೆದಿತ್ತು. ದೂರು ನೀವೇ ಏಕೆ ಕೊಡಲಿಲ್ಲ ಎಂದರೆ ಸಾಕ್ಷಿಯು ನಾನು ಆಸ್ಪತ್ರೆಗೆ ಹೋಗಿದ್ದೆ, ಆದ್ದರಿಂದ ದೂರು ನನ್ನ ಅಣ್ಣ ಕೊಟ್ಟಿದ್ದರು ಎನ್ನುತ್ತಾರೆ.

3. ನೀವು ಘಟನಾ ಸ್ಥಳದಲ್ಲಿ ಇರಲಿಲ್ಲ, ನೀವೇ ಗಾಡಿಯನ್ನು ಚಾಲನೆ ಮಾಡುತ್ತಿರಲಿಲ್ಲ, ನಿಮಗೆ ವಾಹನ ಚಲಾಯಿಸಲು ಬರುವುದೇ ಇಲ್ಲ ಎಂದರೆ ಸರಿಯಲ್ಲ.

4. ಮೃತರು ಆಗಾಗ್ಗೆ ಮದ್ಯ ಸೇವನೆ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಹೌದು ಆದರೆ ಆ ದಿನ ಮಾಡಿರಲಿಲ್ಲ, ಆಗ ಬೆಳಿಗ್ಗೆಯಾಗಿತ್ತು ಎನ್ನುತ್ತಾರೆ. ಆ ದಿನ ಮೃತರು ಕಂಠಪೂರ್ತಿ ಕುಡಿದಿದ್ದರು ಎಂದರೆ ಸರಿಯಲ್ಲ. ಮೃತರಿಗೆ ನಿಮ್ಮ ಮಾವನಿಗೆ ಚಲಾಯಿಸಲು ಬರುತ್ತದೆ ಎಂದರೆ ಸರಿಯಲ್ಲ. ವಾಹನವನ್ನು ಮೃತರೇ ಓಡಿಸುತ್ತಿದ್ದರು, ನೀವು ಓಡಿಸುತ್ತಿರಲಿಲ್ಲ ಎಂದರೆ ಸರಿಯಲ್ಲ.

5. ಕಾರ್ ಚಾಲಕನ ಹೆಸರು ಗೊತ್ತೇ ಎಂದರೆ ಸಾಕ್ಷಿಯು 2 ವರ್ಷಗಳಿಗಿಂತ ಜಾಸ್ತಿ ಆಗಿದೆ ಹೇಗೆ ನೆನಪಿರುತ್ತದೆ ಎನ್ನುತ್ತಾರೆ.

6. ನನಗೆ ವಾಹನ ಚಾಲನೆ ಮಾಡಲು ಪರವಾನಿಗೆ ಇರಲಿಲ್ಲ. ನೀವು ವಾಹನ ಚಲಾಯಿಸುತ್ತಿರಲಿಲ್ಲ, ಮೃತರ ಕುಟುಂಬಕ್ಕೆ ಪರಿಹಾರ ಸಿಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವೇ ವಾಹನ ಚಲಾಯಿಸುತ್ತಿದ್ದರೆ ನಿಮಗೆ ಗಾಯಗಳಾಗಬೇಕಿತ್ತು, ಮೃತರು ವಾಹನ ಚಲಾಯಿಸುತ್ತಿದ್ದಿದ್ದರಿಂದ ಅವರೇ ಕಾರ್ ಗೆ ಟಕ್ಕರ್ ಕೊಟ್ಟಿದ್ದರು ಎಂದರೆ ಸರಿಯಲ್ಲ.

7. ನಾವು ಸಿಂಧನೂರು ಕಡೆಯಿಂದ ಮಸ್ಕಿ ಕಡೆಗೆ ಹೋಗುತ್ತಿದ್ದೆವು. ಬೂತಲದಿನ್ನಿಯ ಡೌನ್ ಹತ್ತಿರ ಅಪಘಾತ ಆಗಿತ್ತು. ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

8. ಸಾಕ್ಷಿಗೆ ಕಡತದಲ್ಲಿರುವ ಫೋಟೋವನ್ನು ತೋರಿಸಿ, ಅದರಲ್ಲಿ ಡೌನ್ ಇದೆಯೇ ಎಂದರೆ ಸಾಕ್ಷಿಯು ಫೋಟೋದಲ್ಲಿ ಕಾಣುತ್ತಿಲ್ಲ, ಆದರೆ ಅಲ್ಲಿ ಡೌನ್ ಇದೆ ಎನ್ನುತ್ತಾರೆ. ಘಟನಾ ಸ್ಥಳದ ಮಾಹಿತಿ ನಿಮಗೆ ಇಲ್ಲ ಎಂದರೆ ಸರಿಯಲ್ಲ. ನಿಮಗೂ ಈ ಕೇಸಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

9. ಮೃತರು ಸಿಂಧನೂರು ಬಿಟ್ಟಾಗ ಎಷ್ಟು ಗಂಟೆಯಾಗಿತ್ತು ಎಂದರೆ ಸಾಕ್ಷಿಯು ಗಾಡಿ ಹೊಡೆಯುವ ಕಾಲಕ್ಕೆ ಸಮಯ ಹೇಗೆ ನೋಡುವುದು ಎನ್ನುತ್ತಾರೆ. ಮೃತರೊಂದಿಗೆ ನೀವು ಇರಲಿಲ್ಲ ಎಂದರೆ ಸರಿಯಲ್ಲ.

10. ಕಾರು ಟಕ್ಕರ್ ಕೊಟ್ಟಾಗ ಮೃತರೊಂದಿಗೆ ನೀವೂ ಸಹ ಬೀಳಬೇಕಿತ್ತು ಎಂದರೆ ಸಾಕ್ಷಿಯು ನಾನು ಗಾಡಿಯನ್ನು ಕಂಟ್ರೋಲ್ ಮಾಡಿ ಹಾಗೆಯೇ ಮಲಗಿಸಿಬಿಟ್ಟೆ ಎನ್ನುತ್ತಾರೆ. ಮೃತರ ಬಟ್ಟೆಯ ಬಣ್ಣವನ್ನು ಈಗ ಹೇಳಲು ಆಗುವುದಿಲ್ಲ, ಏಕೆಂದರೆ 2 ವರ್ಷಗಳಾಗಿವೆ ಎನ್ನುತ್ತಾರೆ. ಮೃತರ ಬಟ್ಟೆಗಳು ಏನಾದವು ಎಂದರೆ ಸಾಕ್ಷಿಯು ನಾನು ಆಗ ಟೆನ್ಷನ್‌ನಲ್ಲಿದ್ದೆ ಎನ್ನುತ್ತಾರೆ.

11. ನಾನು ಆ ದಿನ ರಸ್ತೆಯ ಎಡಗಡೆ ಇದ್ದೆ. ಕಾರಿನಲ್ಲಿ ಇಬ್ಬರು ಇದ್ದರು. ಸ್ಥಳದಲ್ಲಿ ರಸ್ತೆಯ ಉಬ್ಬು ಇತ್ತು, ಕಾರು ನಿಧಾನವಾಗಿ ಬರುತ್ತಿತ್ತು ಎಂದರೆ ಸಾಕ್ಷಿಯು ಕಾರು ತುಂಬಾ ವೇಗವಾಗಿ ಬರುತ್ತಿತ್ತು ಎನ್ನುತ್ತಾರೆ. ಪ್ರತ್ಯಕ್ಷದರ್ಶಿಗಳು ಯಾರೂ ಇಲ್ಲದ ಸಲುವಾಗಿ ನಿಮ್ಮನ್ನು ಸಾಕ್ಷಿದಾರರನ್ನಾಗಿ ಸೃಷ್ಟಿಸಿದ್ದಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಸಿಂಧನೂರು.**